


### ಯೇತಿ ಕುತೂಹಲ

ಮೇ 16ರ ಸಂಚಿಕೆಯ 'ಯೇತಿ' ಯ ಲೇಖನ ಓದಲು ಬಹಳ ರೋಚಕವೆನಿಸಿತು. ಇದು ಪ್ರಾಣಿಯೋ, ಮಾನವನೋ, ತರ್ಕಕ್ಕೆ ನಿಲುಕದ ಸಂಗತಿ. ಹಿಮಾಲಯದಲ್ಲಿ ಕಾಣಲು ಸಿಗುವ ದೈತ್ಯಾಕಾರದ ಹಿಮ ಮಾನವ, ನೇಪಾಳದಲ್ಲಿಯೂ ಕಾಣಿಸಿಕೊಂಡಿದೆ ಎಂದೆಲ್ಲ ಹೇಳಿಕೆಗಳಿವೆ. ಆದರೆ ಇದನ್ನು ನೇರವಾಗಿ ಕಂಡ ಪುರಾವೆಗಳಿಲ್ಲ. 'ಯದ್ ಭಾವ ತದ್‌ಭವತಿ' ಎಂಬಂತೆ ಮಾನವನೋ ಕರಡಿಯೋ, ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ. ಲೇಖನ ಎತ್ತಿದ ತಾರ್ಕಿಕ ಸಂಗತಿಗಳು ಎಲ್ಲರೂ ಯೋಚಿಸುವಂತಿವೆ.

—ಮಧುರ ಸುಬ್ರಹ್ಮಣ್ಯ, ಬೆಂಗಳೂರು

### ಆಕಂಪನ

ಮೇ 9ರ ಸಂಚಿಕೆಯಲ್ಲಿ ಪ್ರಕಟವಾದ ಕಂನಾಡಿಗಾ ನಾರಾಯಣ ಅವರ ಕಥೆ ಆಕಂಪನ ಚೆನ್ನಾಗಿತ್ತು. ಜನಪ್ರಿಯತೆ ಎಂಬುದು ಇಷ್ಟೆಲ್ಲ ರಾದ್ಧಾಂತಕ್ಕೆ ಕಾರಣವಾಯಿತೆಲ್ಲ ಎಂದು ಸೋಜಿಗವಾಯಿತು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

'ಆಕಂಪನ' ಬರೀ ಕಥೆ ಅಲ್ಲ!, ನನ್ನಂತಹ ಬಡಪಾಯಿಗಳ ವ್ಯಥೆ! ಮೊಬೈಲ್ ಟವರ್ ಮಾಫಿಯಾ ಮುರ್ದಾಬಾದ್! ಮುರ್ದಾಬಾದ್!

—ನಾರಾಯಣ ಯಾಜಿ, ಶಿರಾಲಿ

### ಉತ್ತಮ ವಿಶ್ಲೇಷಣೆ

ಮೇ 2ರ ಸಂಚಿಕೆಯಲ್ಲಿನ 'ಮುಂಗಾರು ಮಳೆ ಹನಿ, ಕೆಜಿಎಫ್ ಎಂಬ ಗಣಿ' ವಿಶ್ಲೇಷಣಾ ಲೇಖನ ಕನ್ನಡದ ಎರಡು ಉತ್ತಮ ಚಿತ್ರಗಳನ್ನು ಬಹಳ ಲೆಕ್ಕಾಚಾರಗಳೊಂದಿಗೆ ಸೂಕ್ಷ್ಮವಾಗಿ ಹೋಲಿಸುವಲ್ಲಿ ಯಶಸ್ವಿಯಾಗಿದೆ. ಎರಡೂ ಅದ್ಭುತ ಚಿತ್ರಗಳಾದರೂ, ಎಲ್ಲಾ ವರ್ಗದ ಪ್ರೇಕ್ಷಕರನ್ನು ಮುಟ್ಟುವಲ್ಲಿ ಹೆಚ್ಚು ಯಶಸ್ವಿಯಾದದ್ದು 'ಮುಂಗಾರು ಮಳೆ'. ಕೆಜಿಎಫ್ ಕೂಡ ಅಬ್ಬರಿಸಿ ಬೊಬ್ಬಿರಿದು, ಹಲವು ವರ್ಗದ ಪ್ರೇಕ್ಷಕರುಗಳಿಂದ ಪ್ರಶಂಸೆಗಳಿಸಿರುವುದೂ ಸುಳ್ಳಲ್ಲ.

—ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

### ನವ ವಧು

ಪುಟ ಪುಟವು
ಸುದ್ದಿ ಸಮೃದ್ಧ
ಜ್ಞಾನದಾಹಿಗಳಿಗೆ
ಅರಿವಿನ ಗುರು
ವಿಶಿಷ್ಟ, ವಿಭಿನ್ನ,
ವೈವಿಧ್ಯತೆಯ ಮೂರ್ತರೂಪ
ಶೃಂಗಾರಗೊಳ್ಳುವಳು
ನವವಧುವಿನಂತೆ
ಪ್ರತಿವಾರವು ಸುಧಾ!

—ಎಚ್.ಎನ್. ಕಿರಣ್ ಕುಮಾರ್, ಹಳೇಹಳ್ಳಿ

### ನಮ್ಮಲ್ಲೂ ಒಬ್ಬ ಸುರ್ತಿ ಇಲ್ಲವೇ?

ಮೇ 16ರ ಸಂಚಿಕೆಯಲ್ಲಿ ಮುಂಬೈನ ಆಬಿದ್ ಸುರ್ತಿ ಸೋರುವ ನಲ್ಲಿಯ ಚಿಕಿತ್ಸಕ ಎಂಬ ಲೇಖನ ಓದಿ, ಅವರ ಅನುಪಮ ಸೇವೆ ಕುರಿತ ಲೇಖನ ಓದಿ ಖುಷಿಯಾಯ್ತು. ನಮ್ಮಲ್ಲಿ ನೀರು ಪೋಲು ಮಾಡುವ ಮಂದಿ ಹೆಚ್ಚು, ನೀರು ಸುಲಭವಾಗಿ ದೊರೆಯುವ ಸಮಯದಲ್ಲಿಯಂತೂ, ನಮಗೆ ಅದನ್ನು, ಕಷ್ಟದ ಸಮಯದಲ್ಲಿ, ಉಳಿಸಿ ಉಪಯೋಗಿಸೋಣ ಎನ್ನುವ, ಆಲೋಚನೆ, ಅಪ್ಪಿತಪ್ಪಿಯೂ ಮನದಲ್ಲಿ ಸುಳಿಯೋದಿಲ್ಲ. ಇದು ಒಂದು ವಿಪರ್ಯಾಸ.

—ಎಸ್. ಪ್ರಭಾ, ಬೆಂಗಳೂರು

### ತಪ್ಪು ಶಬ್ದ

ಮೇ 9ರ ಸಂಚಿಕೆಯ ಪುಟಗಳನ್ನು ತಿರುವುತ್ತಿದ್ದಂತೆ ಕಣ್ಣಿಗೆ ಬಿದ್ದ 'ತಂತ್ರಜ್ಞಾನ'ವೆಂಬ ಹೊಸಪುಟ ನೋಡಿ ತುಂಬಾ ಖುಷಿಯಾಯಿತು. ಆದರೆ ಈ ಸಂತೋಷ ಬಹಳ ಹೊತ್ತು ಉಳಿಯಲಿಲ್ಲ. ಕಾರಣ 'ಸ್ಕೆಡ್ಯುಲಿಂಗ್' ಎಂಬ ಪದ. ಏನಿದು ಹೊಸ ಪದ ಎಂದು ಸ್ವಲ್ಪ ಹೊತ್ತು ತಲೆ ಕೆರೆದುಕೊಂಡ ನಂತರ ಅರಿವಾಯಿತು, ಅದು ಸ್ಕೆಡ್ಯುಲಿಂಗ್ ಅಲ್ಲ, ಬದಲಿಗೆ 'ಶೆಡ್ಯೂಲಿಂಗ್' ಎಂದಿರಬೇಕಿತ್ತು ಅಂತ. ಸುಮಾರು ಏಳು ಸಲ ಈ ಪದ ಪುನರಾವರ್ತನೆಯಾಗಿದೆ. ಏಕೆ ಹೀಗಾಯಿತು?

—ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

## ಆಸ್ವಾದನೀಯ ಸಂಚಿಕೆ

ಮೇ 2ರ ಸುಧಾ ಸಂಚಿಕೆ ತುಂಬಾ ಚೆನ್ನಾಗಿದೆ. ಪ್ರತಿಯೊಂದು ಲೇಖನಗಳು ಉಪಯುಕ್ತವಾಗಿವೆ. ಅದರಲ್ಲೂ ಮುಖಪುಟ ಲೇಖನ 'ಮುಟ್ಟು, ಋತುಸ್ರಾವದ ಬಗ್ಗೆ ನಿಮಗೆಷ್ಟು ಗೊತ್ತು?' ತುಂಬಾ ಉಪಯುಕ್ತ. ಮುಟ್ಟಿನ ಬಗ್ಗೆ ನಮ್ಮ ಪೂರ್ವಿಕರ ಬಗ್ಗೆ ಪ್ರತಿಯೊಂದು ಜನಾಂಗದಲ್ಲಿರುವ ನಂಬಿಕೆಗಳನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಇಪ್ಪತ್ತೊಂದನೇ ಶತಮಾನದಲ್ಲೂ, ಆಧುನಿಕ ಯುಗದಲ್ಲೂ ಇನ್ನೂ ಮುಟ್ಟಿನ ಬಗ್ಗೆ ಮೂಢನಂಬಿಕೆಗಳು ಜೀವಂತವಾಗಿವೆ. ಮುಟ್ಟು ಪ್ರಕೃತಿಯೇ ನಮಗೆ ಕೊಟ್ಟ ವರ. ಯಾಕೆಂದರೆ ಅದೇ ಮುಟ್ಟು 9 ತಿಂಗಳು ಗಟ್ಟಿಯಾದಾಗ ಮಾತ್ರ ಮನುಷ್ಯ ಸಂತತಿ ಉಳಿಯಲು ಸಾಧ್ಯ. ಅದೇ ಮುಟ್ಟಿನ ಗಟ್ಟಿಯೇ ನಾವಾಗಿರುವಾಗ ಮೈಲಿಗೆ ಎಲ್ಲಿ? ಯಾರಿಗೆ?

ಗಣಪತಿ ಶರ್ಮಾ ಅವರ 'ಆ ಒಂದು ಫೋಟೊ ಕಥೆ' ಓದಿ ಕರುಳು ಕಿವಿಚಿದಂತಾಯಿತು. ಪ್ಯಾರಿಸ್ಸಿನ ನಾಟ್ರೆ ಡ್ರೇಮ ಚರ್ಚಿಗೆ ಬೆಂಕಿ ಹತ್ತಿಕೊಳ್ಳುವ ಒಂದು ತಾಸು ಮೊದಲು ಮುಂದಿನ ಅನಾಹುತದ ಅರಿವಿಲ್ಲದ ಆ ತಂದೆ–ಮಗಳ ಸ್ವಚ್ಛಂದ ಆಟ ನೋಡಿ ಕಣ್ಣು ತುಂಬಿ ಬಂತು. ಪಾಪ ಆ ಫೋಟೊ ತೆಗೆದ ಯುವತಿ, ಬ್ರೂಕ್ ವಿಂಡ್ಸರ್ ಆ ಫೋಟೊ ಅವರಿಗೆ ಮುಟ್ಟಿಸಲು ಎಷ್ಟೆಲ್ಲಾ ಪ್ರಯತ್ನ ಪಡುತ್ತಿದ್ದಾಳೆ ದೇವರು ಆ ಯುವತಿಯ ಭಾವಕ್ಕೆ ಮೆಚ್ಚಿ ಆ ಫೋಟೊ ಅವರಿಗೆ ಸಿಕ್ಕುವಂತಾಗಲಿ.

—ನೀಲಮ್ಮ ಕುಮಾರಪ್ಪ, ಲಿಂಗಸುಗೂರು

'ಮುಟ್ಟು ಗುಟ್ಟಲ್ಲ' ನಾವೆಲ್ಲರೂ ಓದಿ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಲೇಖನ. ಮಹಿಳೆಯ ಘನತೆ, ಗೌರವದ ಜೀವನಕ್ಕೆ ಸಮಾಜ ಸ್ಪಂದಿಸಬೇಕಾಗಿದೆ. ಕಳೆದ ವಾರವಷ್ಟೇ ನಡೆದ ಘಟನೆ ನೆನಪಾಯಿತು. ಬಂಧುಗಳಲ್ಲೊಬ್ಬರ ಮನೆಯ ಉಪನಯನ ಕಾರ್ಯಕ್ಕಾಗಿ ಹತ್ತಿರದ ಆಗುಂಬೆ ಘಾಟ್ ರಿಪೇರಿಗಾಗಿ ಮುಚ್ಚಿದ್ದರಿಂದ ದೀರ್ಘ ದುರ್ಗಮ ಬಳಸುದಾರಿಯಿಂದ ಪ್ರಯಾಣಿಸಿ ತಲುಪಿದಾಗ ಬೆಳಿಗ್ಗೆ ಕಾರ್ಯ ರದ್ದಾದ ವಿಚಾರ ತಿಳಿದು ಎಲ್ಲರೂ ದಂಗಾದರು. ಕಾರಣ ವಟುವಿನ ತಾಯಿ ಮುಟ್ಟಾಗಿದ್ದು! ಎಲ್ಲರೂ ಆ ತಾಯಿಯನ್ನು ಎಷ್ಟು ಶಪಿಸಿದರೋ. ಬಹಳಷ್ಟು ತಯಾರಿ ನಡೆಸಿ ದೂರದಿಂದೆಲ್ಲ ಬಂಧು ಬಳಗ ಬಂದು ಮಾಡಿದಾಗ ದೈಹಿಕ ಪ್ರಕ್ರಿಯೆಯೊಂದು ಶುಭಕಾರ್ಯಕ್ಕೆ ತಡೆವೊಡ್ಡುತ್ತದೆಯೇ? ಈ ಕುರಿತು ಸಮುದಾಯದ ಹಿರಿಯರು, ಗುರುಗಳು ಮಾರ್ಗದರ್ಶನ ಮಾಡಬೇಕು. ಇಲ್ಲದಿದ್ದರೆ ಹೆಣ್ಣಿನ ಸಬಲೀಕರಣವೆಂದು ಎಷ್ಟು ಬೊಬ್ಬೆ ಹಾಕಿದರೂ, ಉನ್ನತ ಸ್ಥಾನಕ್ಕೇರಿದರೂ ಅವಳು ನೇಪಥ್ಯದಲ್ಲಿಯೇ ಇರಬೇಕಾಗುತ್ತದೆ.

—ಕೇಶವ ಪ್ರಭು, ಶಿವಮೊಗ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in